

ಸೋದರಿ ಲಲಿತಾರ ಈ ಮಹಿಮೆಯ ಮೂಲವೆಲ್ಲಿ? ಇದನ್ನು ಸುಧೀರಾ ಒಂದು ನಿಗೂಢ ಘಟನೆಯ ಮೂಲಕ ಹೊರಗೆಡವಿದರು. ಸುಧೀರಾ ಹೀಗೆ ಬರೆಯುತ್ತಾರೆ: "ಪಸಾಡೆನದ ಮನೆಯಲ್ಲಿ ವಿಶ್ರಾಂತಿಯ ಕೋಣೆಗಳು ಎರಡನೆಯ ಮಹಡಿಯಲ್ಲಿದ್ದವು. ಅಲ್ಲಿಗೆ ಹೋಗಲು ಇದ್ದ ಮೆಟ್ಟಿಲುಗಳು ಕಡಿದಾದವು, ಕಡಿಮೆ ಅಗಲದವು. ಒಂದು ದಿನ ಬೆಳಗ್ಗೆ ಅಲ್ಲಿದ್ದವರೆಲ್ಲರೂ ಉಪಾಹಾರಕ್ಕೆ ಕೆಳಗಿಳಿದು ಬರುತ್ತಿದ್ದರು. ಸ್ವಾಮಿ ವಿವೇಕಾನಂದರ ಹಿಂದೆಯೇ ಸೋದರಿ ಇದ್ದಳು. ಇದ್ದಕ್ಕಿದ್ದಂತೆ ಅವಳಿಗೆ ಆ ಕಡಿದಾದ ಮೆಟ್ಟಿಲುಗಳ ಮೇಲೆ ಸ್ವಲ್ಪ ಎಡವಿದಂತಾಯಿತು. ಅವಳು ಮೇಲೆ ಏಳಲು ಸ್ವಾಮೀಜಿಯವರ ಭುಜಗಳನ್ನು ಹಿಡಿದಳು. ಅವರನ್ನು ಸ್ಪರ್ಶಿಸುತ್ತಲೇ ಇಡೀ ಜಗತ್ತೇ ಅವಳಿಗೆ ಮರೆಯಾಯಿತು. ಅವಳು ಬೇರೆಯದೇ ಪ್ರಜ್ಞೆಯ ಸ್ತರದಲ್ಲಿದ್ದಳು. ಉಳಿದ ಮೆಟ್ಟಿಲುಗಳನ್ನು ಅವಳು ಹೇಗೆ ಇಳಿದು ಬಂದಳೆಂದು ಅವಳಿಗೇ ನೆನಪಿಲ್ಲ. ಅವಳನ್ನು ಸ್ವಾಮೀಜಿ ಊಟದ ಕೋಣೆಗೆ ಕರೆತಂದು ಕುಳ್ಳಿರಿಸಿದರು. ಸ್ವಾಮೀಜಿ ಅದೆಷ್ಟು ಆನಂದದಿಂದ ತಮಾಷೆಯಾಗಿ ಮಾತನಾಡುತ್ತ ಎಲ್ಲರನ್ನೂ ರಂಜಿಸುತ್ತಿದ್ದರೆಂದರೆ, ಸೋದರಿ ಸ್ತಬ್ಧವಾಗಿರುವುದನ್ನು ಯಾರೂ ಗಮನಿಸಲಿಲ್ಲ. ಅವರ ಭುಜಗಳನ್ನು ಮುಟ್ಟಿದ ಮಾತ್ರಕ್ಕೆ ಸ್ವಾಮೀಜಿ ಅವಳನ್ನು ಬೇರೆಯೇ ಸ್ತರಕ್ಕೆ ಕರೆದೊಯ್ದಿದ್ದರು. ಆ ಕ್ಷಣದಿಂದ ಸ್ವಾಮೀಜಿ ಅವಳ ಪಾಲಿಗೆ ದೇವರಾದರು."

ಸುಧೀರಾ ನೆನಪಿಸಿಕೊಳ್ಳುತ್ತಾರೆ, ಯಾರು ಈ ಕಥೆಯನ್ನು ಕೇಳುತ್ತಿದ್ದರೋ ಅವರು ಸೋದರಿ ಲಲಿತಾ 'ಅವರು ದೇವರು' ಎಂದು ಹೇಳುವಾಗ, ಆಕೆಯಲ್ಲಿ ಮೂಡುತ್ತಿದ್ದ ಅಪಾರ ಗೌರವವನ್ನು ಕಂಡು ಕರಗಿಹೋಗುತ್ತಿದ್ದರು. ಸೋದರಿ ಲಲಿತಾರ ಅಂತರಂಗದ ಅನುಭವ – ಆ ಮೆಟ್ಟಿಲುಗಳ ಮೇಲೆ ಆದುದು – ಅವರ ಆಧ್ಯಾತ್ಮಿಕ ಜೀವನವನ್ನು ಪೋಷಿಸಿತು. ಆ ಅನುಭವದ ನೆನಪೊಂದೇ ನಿಸ್ಸಂಶಯವಾಗಿ ಅವರ ದೈನಂದಿನ ಧ್ಯಾನಕ್ಕೆ ಮಾನಸಿಕ ಆಹಾರವಾಗಿ ಅವರ ಪ್ರಜ್ಞೆಯನ್ನು ಮೇಲಕ್ಕೆತ್ತುತ್ತಿತ್ತು. ಆದ್ದರಿಂದ ಇತರರು ಅವರ ವಿಶೇಷ ಇರುವಿಕೆಯನ್ನು ಅನುಭವಿಸುವಂತೆ ಆಗುತ್ತಿತ್ತು. ಅಥವಾ ಒಬ್ಬ ಸೋದರಿ ಬರೆದಂತೆ, "ಪಾವಿತ್ರ್ಯದ ಬೆಳಕು" ಅವರಿಂದ ಪಸರಿಸುತ್ತಿತ್ತು. ಇನ್ನೊಬ್ಬರು ಸೋದರಿ ಹೀಗೆ ಹೇಳುತ್ತಾರೆ: "ಅವರ ಸಾನ್ನಿಧ್ಯದಲ್ಲಿ ಏನೋ ಒಂದು ಅದ್ಭುತವನ್ನು ನಾನು ಯಾವಾಗಲೂ ಅನುಭವಿಸುತ್ತಿದ್ದೆನು."

ಸೋದರಿ ಲಲಿತಾ ಧ್ಯಾನವನ್ನು ನಿಯಮಿತವಾಗಿ ಮಾಡುತ್ತಿದ್ದರು. ತಮ್ಮ ೮೦ರ ವಯಸ್ಸಿನಲ್ಲಿಯೂ ಅವರು ದಿನಕ್ಕೆ ಮೂರು ಸಲ ದೇವಮಂದಿರಕ್ಕೆ ತಪ್ಪದೆ ಹೋಗುತ್ತಿದ್ದರು. ಅವರು ದೇವಸ್ಥಾನದೊಳಗೆ ಹೇಗೆ ಬರುತ್ತಿದ್ದರೆಂಬುದನ್ನು ಪ್ರಭಾಪ್ರಾಣಾ ಹೀಗೆ ನೆನಪಿಸಿಕೊಳ್ಳುತ್ತಾರೆ: "ಅವರು ಹಕ್ಕಿಯ ರೆಕ್ಕೆಯಂತೆ ಹಗುರವಾಗಿ, ಸದ್ದಿಲ್ಲದೆ ಬಂದು, ಸುಖಾಸನದಲ್ಲಿ ಅಲುಗಾಡದೆ, ಒಂದು ಗಂಟೆ ಕಾಲ ಕುಳಿತುಕೊಳ್ಳುತ್ತಿದ್ದರು." ಪ್ರಖ್ಯಾತ ಸಾಹಿತಿ ಕ್ರಿಸ್ಟೋಫರ್ ಇಶರ್‌ವುಡ್ ಆರಂಭದ ದಿನಗಳಲ್ಲಿ ವೇದಾಂತ ಕೇಂದ್ರದಲ್ಲಿ ವಾಸಿಸುತ್ತಿದ್ದರು, ಅವರು ಪ್ರಾರ್ಥನಾಮಂದಿರದಲ್ಲಿ ಕುಳಿತಿರುತ್ತಿದ್ದ ಸೋದರಿಯನ್ನು ನೋಡಿ ಬೆರಗಾಗಿದ್ದರು. "ಯಾವುದರಲ್ಲೂ ತಲೆ ಹಾಕದ, ಅತ್ಯಂತ ಗಂಭೀರವಾದ ನಿರ್ಲಿಪ್ತ ಸ್ವಭಾವ ಅವರದು" ಎಂದು ಸೋದರಿ ಲಲಿತಾರ ಬಗ್ಗೆ ಬರೆಯುತ್ತಾರೆ, ಇಶರ್‌ವುಡ್.

ಸ್ವಾಮಿ ವಿವೇಕಾನಂದರ ಜಯಂತಿಯ ದಿನದಂದು, ಸೋದರಿ ಲಲಿತಾ ವಿಶೇಷ ಉಪಾಹಾರವನ್ನು ದೇವಮಂದಿರದಲ್ಲಿ ನೈವೇದ್ಯವಾಗಿ ನೀಡುತ್ತಿದ್ದರು. ಅಂದಿನಿಂದ ಅದು ದಕ್ಷಿಣ ಕ್ಯಾಲಿಫೋರ್ನಿಯದ ವೇದಾಂತ ಕೇಂದ್ರದಲ್ಲಿ ಒಂದು ಸಂಪ್ರದಾಯವಾಗಿಬಿಟ್ಟಿದೆ. ಆದರೆ ಸೋದರಿ ಈ ಉಪಾಹಾರದ ನೈವೇದ್ಯವನ್ನು ಕೊಡುವಾಗ, ಕಾಲಮಾನದಲ್ಲಿ ಹಿಂದಕ್ಕೆ ಹೋಗುತ್ತಿದ್ದರು. ಪಸಾಡೆನಾದ ೩೦೯, ಮೊಂಟೆರಿ ರಸ್ತೆಯಲ್ಲಿದ್ದ ತಮ್ಮ ಮನೆಯಲ್ಲಿ ಅವರು ಸ್ವಾಮೀಜಿಗೆ, ಅಮೇರಿಕದ ಉಪಾಹಾರವಾದ ಕಿತ್ತಳೆ ಹಣ್ಣಿನ ರಸ, ಎರಡು ಹುರಿದ ಮೊಟ್ಟೆಗಳು, ಎರಡು ತುಂಡು ಟೋಸ್ಟ್ ಮತ್ತು ಮುರಬ್ಬ, ಎರಡು ಕಪ್ ಹಾಲು, ಸಕ್ಕರೆ ಹಾಕಿದಂತಹ ಕಾಫಿ ಕೊಡುತ್ತಿರುವ ದೃಶ್ಯ! ಯಾರು ಈ ಪ್ರಾತಃಕಾಲದ ನೈವೇದ್ಯದ ಸೇವೆಯಲ್ಲಿ ಸಾಕ್ಷಿಗಳಾಗಿದ್ದರೋ, ಅವರು ತಮ್ಮ ಅನುಭವವನ್ನು ಹೀಗೆ ಹೇಳುತ್ತಿದ್ದರು: "ಅದು ಕೇವಲ ಪೂಜಾಕ್ರಿಯೆಯಾಗಿರಲಿಲ್ಲ. ಅಲ್ಲಿ ಸ್ವಾಮೀಜಿ ನಿಜವಾಗಿ ಇದ್ದರು....."

ಸೋದರಿ ಲಲಿತಾ ಭಾಗವಹಿಸಿದ ಕೊನೆಯ ವಿವೇಕಾನಂದರ ಜಯಂತಿಯ ದಿನದಂದು, ಕಾರ್ಯಕ್ರಮಗಳಾಗುತ್ತಲೇ, ದೇವಸ್ಥಾನದಿಂದ ನೇರವಾಗಿ, ಕಾಯಿಲೆಯಿಂದಾಗಿ ಅಲ್ಲಿಗೆ ಬರಲಾಗದಿದ್ದ ಸ್ವಾಮಿ ಪ್ರಭವಾನಂದರನ್ನು ಭೇಟಿಯಾಗಲು ಅವರು ಹೋದರು. ಅವರ ಸೇವೆ ಮಾಡುತ್ತಿದ್ದ ಅಭಯಾ (ಶ್ರೀಮತಿ ಕೆಂಪ್ ಡ್ರೈವರ್) ಪ್ರಕಾರ, ಸೋದರಿಯು ಕೋಣೆಯನ್ನು ಪ್ರವೇಶಿಸಿ, ಪ್ರಭವಾನಂದರ ಕೈ ಹಿಡಿದುಕೊಂಡು, "ಅವರೆಲ್ಲ ಅಲ್ಲಿದ್ದರು" ಎಂದು ಹೇಳಿದರು. ಸ್ವಾಮಿ ಪ್ರಭವಾನಂದರು ಒಪ್ಪಿಗೆಯೆಂಬಂತೆ ತಲೆಯಾಡಿಸಿದರು.

*(ಮುಂದುವರಿಯುವುದು)*



# ಸ್ವಾಮಿ ವಿವೇಕಾನಂದರು ನಿರೂಪಿಸಿದ
# ನೀತಿಕಥೆಗಳು



ಡಾ. ಕೆ. ಅನಂತರಾಮು

**ಸ್ವಾಮಿ ವಿವೇಕಾನಂದರು ಅತ್ಯಂತ ಶ್ರೇಷ್ಠಮಟ್ಟದ ಕಥೆಗಾರರು. ಅವರು ತಮ್ಮ ಪ್ರವಚನಗಳಲ್ಲಿ ಹೇಳಿರುವ ಕಥೆಗಳನ್ನು, ಕನ್ನಡದ ಹಿರಿಯ ಲೇಖಕರಾದ ಡಾ. ಕೆ. ಅನಂತರಾಮು ಅವರು ತಮ್ಮದೇ ಆದ ಶೈಲಿಯಲ್ಲಿ ವಿಸ್ತರಿಸಿ, ಅವುಗಳಿಗೆ ಹೊಸ ರೂಪವನ್ನು ಕೊಟ್ಟು, ಸ್ವಾರಸ್ಯವಾಗಿ ಬಣ್ಣಿಸಿದ್ದಾರೆ. ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವದ ಪ್ರಯುಕ್ತ ಈ ಹೊಸ ಸರಣಿಯನ್ನು ಆರಂಭಿಸುತ್ತಿದ್ದೇವೆ. ಓದುಗರೆಲ್ಲರಿಗೂ ಇದು ಮನೋರಂಜನೆಯ ಜೊತೆಗೆ, ಆತ್ಮವಿಕಾಸಕ್ಕೆ ಅವಶ್ಯವಾದ ಸ್ಫೂರ್ತಿ ಹಾಗೂ ಪ್ರೇರಣೆಯನ್ನು ನೀಡಲಿ ಎಂದು ಆಶಿಸುತ್ತೇವೆ. ಮಾನ್ಯ ಲೇಖಕರು ಸುಲಲಿತ ಲೇಖಕರು, ಖ್ಯಾತ ವಾಗ್ಮಿಗಳು, ಉತ್ತಮ ಸಹೃದಯರು ಮತ್ತು ಆಶ್ರಮದ ಭಕ್ತರು.**

## ಮೋಕ್ಷವೆಂಬುದು ದೂರವಿಲ್ಲ

ಮೋಕ್ಷಸಾಧಕನು ಯಾರನ್ನೂ ದ್ವೇಷಿಸದೆ, ಎಲ್ಲರನ್ನೂ ತನ್ನ ಗೆಳೆಯರಂತೆ ಭಾವಿಸಬೇಕು. ಅವನು ದಯಾಪರನೂ, ನಿರಹಂಕಾರಿಯೂ, ಕ್ಷಮಾಶೀಲನೂ, ನಿತ್ಯತೃಪ್ತನೂ ಆಗಿರಬೇಕು. ಸುಖದುಃಖಗಳಲ್ಲಿ ಸಮಾನಭಾವದಿಂದಿರಬೇಕು. ಏಕಾಗ್ರ ಮನಸ್ಕನಾಗಿ ತನ್ನನ್ನು ತಾನು ಸಂಪೂರ್ಣವಾಗಿ ಪರಮಾತ್ಮನಿಗೆ ಸಮರ್ಪಿಸಿಕೊಂಡಿರಬೇಕು. ತಾನು ಮಾಡುವ ಸಾಧನೆಯಲ್ಲಿ ಗಟ್ಟಿಗನಾಗಿದ್ದು, ಜಗತ್ತನ್ನೇ ತನ್ನ ಮನೆಯನ್ನಾಗಿ ಮಾಡಿಕೊಂಡು ಜೀವಿಸುತ್ತಿರಬೇಕು. ಯಾರೇ ಹೊಗಳಿದರೂ ಬೈದರೂ ವಿಚಲಿತನಾಗದೆ ಬುದ್ಧಿಯನ್ನು ಸ್ಥಿರವಾಗಿಟ್ಟುಕೊಂಡಿರಬೇಕು. ಅಂತಹವನು ಪರಮಾತ್ಮನಿಗೂ ಪ್ರಿಯನಾಗಿ ಮೋಕ್ಷವನ್ನು ಸಾಧಿಸಿಕೊಳ್ಳುತ್ತಾನೆ.

ಒಂದಾನೊಂದು ಅರಣ್ಯದಲ್ಲಿ ಸಿದ್ಧ ಮತ್ತು ಆನಂದ ಎಂಬಿಬ್ಬರು ಸಾಧಕರು ತಪೋನಿರತರಾಗಿದ್ದರು. ಸಿದ್ಧನು ಅತ್ತಿತ್ತ ಅಲುಗದೆ ನಿಶ್ಚಲನಾಗಿ ಪದ್ಮಾಸನದಲ್ಲಿ ಕುಳಿತು ತಪೋಮಗ್ನನಾಗಿದ್ದುದರಿಂದ, ಅವನ ಕಾಲುಗಳಿಂದ ಪ್ರಾರಂಭಿಸಿ, ಗೆದ್ದಲುಹುಳುಗಳು ಅವನ ಮೇಲೆ ಹುತ್ತವನ್ನು ಕಟ್ಟಿಕೊಂಡು ಮೇಲೇರುತ್ತ, ಅವನ ಭುಜದವರೆಗೂ ಬಂದಿದ್ದುವು. ಅವನಿಗಿಂತ ಸ್ವಲ್ಪ ದೂರದಲ್ಲಿ ಆನಂದನಾದರೋ ಒಂದೇ ಕಡೆ ದೀರ್ಘಕಾಲ ಕುಳಿತುಕೊಳ್ಳದೆ, ಆಗಾಗ ಧ್ಯಾನದಿಂದ ಮೇಲೆದ್ದು, ಏಕತಾರಿಯನ್ನು ಮೀಟುತ್ತ, ಕುಣಿಯುತ್ತ, ಶ್ರೀಮನ್ನಾರಾಯಣನ ಲೀಲಾವಿಲಾಸಗಳನ್ನು ಗಾನ ಮಾಡುತ್ತ ಆನಂದಪರವಶನಾಗುತ್ತಿದ್ದನು.

ಒಂದು ದಿನ ದೇವರ್ಷಿ ನಾರದರು ಮಹತಿಯೆಂಬ ತಮ್ಮ ಏಳು ತಂತಿಯ ವೀಣೆಯನ್ನು ನುಡಿಸುತ್ತ, ಮಧುರ ಕಂಠದಿಂದ ಗಾನ ಮಾಡುತ್ತ, ಸಿದ್ಧ ಮತ್ತು ಆನಂದರು ತಪಸ್ಸು ಮಾಡುತ್ತಿದ್ದ ಅರಣ್ಯಮಾರ್ಗವಾಗಿ ಸಾಗುತ್ತಿದ್ದರು. ಅವರು ಮೊದಲಿಗೆ ಹುತ್ತದಲ್ಲಿ ಮುಚ್ಚಿಹೋಗುತ್ತಿದ್ದ ಸಿದ್ಧನನ್ನು ಕಂಡು ಆಶ್ಚರ್ಯ ಚಕಿತರಾದರು. ನಾರದರ ಗಾನದಿಂದ ಸಿದ್ಧನೂ ಆ ಹೊತ್ತಿಗೆ ಎಚ್ಚರಗೊಂಡು ಕಣ್ಣುತೆರೆದನು. ನಾರದರೇ ಮುಂದಾಗಿ ಆತನನ್ನು ಮಾತನಾಡಿಸಿ, "ನಿನ್ನ ತಪಸ್ಸು ಉಜ್ವಲವಾಗಿದೆ; ಯಾವ ಉದ್ದೇಶದಿಂದ ನೀನು ಇಂತಹ ಕಠಿಣ ತಪಸ್ಸಿನಲ್ಲಿ ಮುಳುಗಿದ್ದೀಯಪ್ಪಾ?" ಎಂದು ಕೇಳಿದರು.ಆಗ ಸಿದ್ಧನು, "ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ನಿಮ್ಮಂತಹ ಜ್ಞಾನಿಗಳು ಮೋಕ್ಷವೇ ಪರಮ ಪುರುಷಾರ್ಥ ಎಂದು ಉಪದೇಶಿಸಿದ್ದಾರೆ. ಹಾಗೆ ಶ್ರೇಯಸ್ಕರವಾದ ಮೋಕ್ಷವನ್ನು ಪಡೆಯಬೇಕೆಂಬುದೇ ನನ್ನ ಹಂಬಲ" ಎಂದು ಉತ್ತರಿಸಿದನು. ಆಗ ನಾರದರು ಸಂತೋಷಪಟ್ಟು, "ನಿನ್ನ ಮನೋರಥ ಈಡೇರಲಪ್ಪಾ" ಎಂದು ಆಶೀರ್ವದಿಸಿದರು. ಆಗ ಸಿದ್ಧನು, "ಸ್ವಾಮಿ, ತಾವು ಎತ್ತ ಕಡೆ ಹೊರಟಿದ್ದೀರಿ?" ಎಂದು ಕೇಳಿದನು. ನಾರದರು, "ಮಹಾವಿಷ್ಣುವಿನ ದರ್ಶನಭಾಗ್ಯಕ್ಕಾಗಿ ವೈಕುಂಠಕ್ಕೆ ಹೋಗುತ್ತಿದ್ದೇನೆ" ಎಂದರು. ಆಗ ಸಿದ್ಧನು, "ಸ್ವಾಮಿ, ನಿಮ್ಮಿಂದ ನನಗೊಂದು ಉಪಕಾರವಾಗಬೇಕು, ಈ ಸಿದ್ಧನಿಗೆ ಮೋಕ್ಷವಾಗುವುದು ಯಾವಾಗ ಎಂದು ಮಹಾವಿಷ್ಣುವನ್ನು ಕೇಳಿ ತಿಳಿದುಕೊಂಡು ಬರಬೇಕು" ಎಂದು ಬೇಡಿಕೊಂಡನು. ನಾರದರು "ಹಾಗೆಯೇ ಆಗಲಿ" ಎಂದು ಒಪ್ಪಿಕೊಂಡರು.

ಹಾಗೆಯೇ ಮುಂದೆ ಸಾಗುವಾಗ ನಾರದರು ಅರಣ್ಯದ ಹುಣಸೇಮರವೊಂದರ ಬುಡದಲ್ಲಿ ಮೈಮರೆತು ನರ್ತಿಸುತ್ತಿದ್ದ ಆನಂದನನ್ನು ದೂರದಿಂದಲೇ ನೋಡಿದರು. ಆದರೆ ಆತನನ್ನೇನೂ ಮಾತನಾಡಿಸದೆ ಮುಂದಕ್ಕೆ ಹೋದರು. ಆಗ ಆನಂದನೇ ನಾರದರನ್ನು ಹುಚ್ಚುಹುಚ್ಚಾಗಿ ಕೂಗುತ್ತ, "ಸ್ವಾಮಿ,




ತಾವು ಎಲ್ಲಿಗೆ ಹೋಗುತ್ತಿದ್ದೀರಿ?" ಎಂದು ಕೇಳಿದನು. ನಾರದರು ಸಿದ್ಧನಿಗೆ ಹೇಳಿದಂತೆಯೇ "ಮಹಾವಿಷ್ಣುವಿನ ದರ್ಶನಭಾಗ್ಯಕ್ಕಾಗಿ ವೈಕುಂಠಕ್ಕೆ ಹೋಗುತ್ತಿದ್ದೇನೆ" ಎಂದು ಉತ್ತರಿಸಿದರು. ಆಗ ಆನಂದನು, "ಸ್ವಾಮಿ, ನಿಮ್ಮ ಪಾದ ಅಷ್ಟು ದೂರ ಬೆಳೆಯುವುದಾದರೆ ಈ ಆನಂದನಿಗೆ ಮೋಕ್ಷವಾಗುವುದು ಯಾವಾಗ ಎಂದು ಆ ಭಗವಂತನನ್ನು ಕೇಳಿಕೊಂಡು ಬನ್ನಿ, ಸ್ವಾಮಿ. ಇದೊಂದು ಉಪಕಾರ ನಿಮ್ಮಿಂದ ಆಗಲೇಬೇಕು" ಎಂದು ಪ್ರಾರ್ಥಿಸಿದನು. ನಾರದರು, "ಆಗಲಿ ಆಗಲಿ, ಕೇಳಿ ಕೊಂಡು ಬರುತ್ತೇನೆ" ಎನ್ನುತ್ತ ಮುಂದಕ್ಕೆ ಸಾಗಿದರು. ಆನಂದನು ಹಿಂದಿನಿಂದ ಓಡಿಹೋಗಿ ಅವರ ಚರಣಕಮಲಗಳ ಮೇಲೆ ಹೊರಳಾಡಿದನು. ಆಗ ನಾರದರು, "ಮೇಲೇಳು ಆನಂದ, ನಿನಗೆ ಮಂಗಳವಾಗಲಿ, ಮೋಕ್ಷ ಸಿದ್ಧಿಸಲಿ" ಎಂದು ಆಶೀರ್ವದಿಸಿದರು.

ಅದೆಷ್ಟೋ ದಿನಗಳ ತರುವಾಯ ನಾರದರು ವಿಷ್ಣುಲೋಕ ದಿಂದ ಭೂಲೋಕಕ್ಕೆ ಮರಳಿಬಂದರು. ಸಿದ್ಧ ಮತ್ತು ಆನಂದರ ಮೋಕ್ಷ ವಿಚಾರವನ್ನು ಭಗವಂತನಿಂದ ಕೇಳಿ ತಿಳಿದುಕೊಂಡೇ ಬಂದಿದ್ದರು. ಮೊದಲಿಗೆ ಅವರು ಸಿದ್ಧನನ್ನೇ ಸಂಧಿಸಿದರು. "ಇನ್ನು ನಾಲ್ಕು ಜನ್ಮಗಳ ತರುವಾಯ ನಿನಗೆ ಮೋಕ್ಷವಾಗುತ್ತದೆಯೆಂದು ಮಹಾವಿಷ್ಣುವು ಅಪ್ಪಣೆ ಕೊಡಿಸಿ ದ್ದಾನಪ್ಪಾ" ಎಂದು ತಿಳಿಸಿಕೊಟ್ಟರು. ಆ ಮಾತಿನಿಂದ ಸಿದ್ಧನಿಗೆ ಕಳವಳವೇ ಹೆಚ್ಚಿತು. ಅವನು ಸಂಕಟದಿಂದ ಕಣ್ಣೀರು ಹರಿಸುತ್ತ, "ಅಯ್ಯೋ, ಮೈಮೇಲೆ ಹುತ್ತ ಬೆಳೆಯುವಷ್ಟು ತಪಸ್ಸು ಮಾಡಿದ್ದೇನೆ. ಇದು ಸಾಲದಾಗಿ ನಾನು ಇನ್ನೂ ನಾಲ್ಕು ಜನ್ಮಗಳನ್ನೆತ್ತಿ ತೊಳಲಬೇಕೇ" ಎನ್ನುತ್ತ ಕುಗ್ಗಿ ಕುಸಿದು ಹೋದನು. ಆಮೇಲೆ ನಾರದರು ಆನಂದನನ್ನು ಸಮೀಪಿಸಿ, "ಈ ಹುಣಸೇ ಮರದಲ್ಲಿ ಎಷ್ಟು ಎಲೆಗಳಿವೆಯೋ ಅಷ್ಟು ಜನ್ಮಗಳನ್ನು ಎತ್ತಿದ ಮೇಲೆ ನಿನಗೆ ಮುಕ್ತಿ ಲಭಿಸುತ್ತದೆ ಎಂದು ಮಹಾವಿಷ್ಣುವು ನುಡಿದಿದ್ದಾನೆ, ಆನಂದ" ಎಂದು ತಿಳಿಸಿದರು. ಆ ಮಾತುಗಳನ್ನು ಕೇಳಿ ಆನಂದನು "ನಾನು ಗೆದ್ದೆ, ನಾನು ಗೆದ್ದೆ" ಎನ್ನುತ್ತ ಪೂರ್ವಾಧಿಕ ಉತ್ಸಾಹದಿಂದ ಕುಣಿಯತೊಡಗಿದನು. ಒಂದು ಹುಣಸೆಯ ಮರದಲ್ಲಿ ಎಷ್ಟು ಎಲೆಗಳಿವೆಯೆಂದು ಯಾರಾದರೂ ಎಣಿಸಿ ಮುಗಿಸಲು ಸಾಧ್ಯವೇ! "ಮೋಕ್ಷ ಪಡೆಯಲು ನೀನು ಕೋಟಿ ಕೋಟಿ ಜನ್ಮಗಳನ್ನು ಎತ್ತಿಬರಬೇಕು" ಎಂದು ಹೇಳಿದಂತೆಯೇ ಆಯಿತು. ಆದರೂ ಆನಂದನು ಅದರಿಂದ ಧೃತಿಗೆಡದೆ ನರ್ತನ ಪರವಶನಾಗಿದ್ದುದನ್ನು ಕಂಡು ನಾರದರಿಗೇ ಅಚ್ಚರಿಯಾಯಿತು. ಸಿದ್ಧನಾದರೋ ನಾಲ್ಕು ಜನ್ಮಗಳನ್ನೆತ್ತಬೇಕು ಎಂದು ಹೇಳಿದಷ್ಟಕ್ಕೇ ಕುಗ್ಗಿ ಕುಸಿದಿದ್ದಾನೆ, ಈ ಆನಂದನು ಕೋಟಿ ಕೋಟಿ ಜನ್ಮಗಳನ್ನು ನೀನು ಎತ್ತಬೇಕಾಗಿದೆಯೆಂದರೂ ಧೃತಿಗೆಡದೆ ಸಂಭ್ರಮಿಸುತ್ತಿದ್ದಾನಲ್ಲಾ ಎಂದು ಚಕಿತರಾಗಿ ಆನಂದನನ್ನು ಕುರಿತು, "ನಿನ್ನ ಮೋಕ್ಷದ ಹಾದಿ ಇನ್ನೂ ಬಹಳ ದೂರವಿದೆಯೆಂದು ತಿಳಿದರೂ ನೀನು ಸಂಭ್ರಮದಿಂದ ಕುಣಿಯುತ್ತಿದ್ದೀಯಲ್ಲ, ಆನಂದ. ಏನು ಕಾರಣ?" ಎಂದು ಕೇಳಿಯೇಬಿಟ್ಟರು. ಆಗ ಆನಂದನು "ಎಷ್ಟು ಜನ್ಮಗಳನ್ನೆತ್ತಿದರೇನಂತೆ, ಮೋಕ್ಷವಂತೂ ಸಿದ್ಧಿಸುತ್ತದೆಯೆಂದು ಸ್ವಾಮಿಯ ಮುಖದಿಂದ ಬಂದ ಮೇಲೆ ಅಂಜುವ ಕಾರಣವೇನಿದೆ?" ಎಂದು ದಿಟ್ಟತನದ ಉತ್ತರ ಕೊಟ್ಟನು. ಆ ಉತ್ತರದಿಂದ ನಾರದರಿಗೂ ಸಂತೋಷವಾಯಿತು. ಸರ್ವಾಂತರ್ಯಾಮಿಯಾದ ವೈಕುಂಠದ ಸ್ವಾಮಿಗೂ ಸಂತೋಷವಾಯಿತು. ಅಷ್ಟು ಮಾತ್ರವಲ್ಲ, ಆ ಕ್ಷಣವೇ "ಅಪ್ಪಾ ಮಗುವೇ ಆನಂದ, ನೀನು ಮುಕ್ತಿಗಾಗಿ ಮತ್ತೆ ಜನ್ಮಗಳನ್ನೆತ್ತಬೇಕಾಗಿಲ್ಲ. ಈ ಜನ್ಮದಲ್ಲಿಯೇ, ಈ ಕ್ಷಣದಲ್ಲಿಯೇ ನಿನಗೆ ಮುಕ್ತಿ ಲಭಿಸಿದೆ, ಹೋಗು" ಎಂದು ಅಶರೀರವಾಣಿ ಯಾಯಿತು.

ಸಾಧನೆ ಮಾಡಲು ಗಟ್ಟಿಯಾದ ಮನಸ್ಸು ಬೇಕು, ಚಂಚಲತೆ ಯಿಲ್ಲದ ಪ್ರಯತ್ನವು ಬೇಕು. ಎಷ್ಟೇ ಜನ್ಮಗಳು ಬಂದರೂ ಕಡಿವಡೆಯದ ಸಾಧನೆಯಲ್ಲಿ ತೊಡಗುತ್ತೇನೆಂಬ ಛಲವು ಬೇಕು. ಹಿಂಜರಿಕೆಯೆಂಬುದು ಎಳ್ಳು ಮೊನೆಯಷ್ಟೂ ಇರಬಾರದು. ಆನಂದನ ವ್ಯಕ್ತಿತ್ವವು ಹಾಗಿತ್ತು. ಆರಂಭದಲ್ಲಿಯೇ ವಿವರಿಸಿದ ಸದ್ಗುಣಗಳಿಂದ ಅವನು ತುಂಬಿ ತುಳುಕುತ್ತಿದ್ದನು. ಹೀಗಾಗಿ ಭಗವಂತನ ಕೃಪೆಯೂ ಕೂಡಿಕೊಂಡು ಅವನು ಜೀವನ್ಮುಕ್ತನೇ ಆಗಿಬಿಟ್ಟನು. ಆದರೆ ಸಿದ್ಧನಿಗೆ ನಾಲ್ಕು ಜನ್ಮಗಳೇ ಬಹಳವಾಗಿ ತೋರಿ, ನಿರಾಸೆಗೆ ತನ್ನನ್ನೇ ತಾನು ತಳ್ಳಿಕೊಂಡನು. ಎಷ್ಟು ಯುಗ ಗಳಾದರೂ ನೋಡುವೆನೆಂಬ ಸ್ಥಿರ ಮನಸ್ಕತೆಯಿಂದ ಮಾತ್ರವೇ ಶ್ರೇಷ್ಠವಾದ ಫಲ ಲಭಿಸುತ್ತದೆಯೆಂಬುದನ್ನು ನೆನೆಪಿನಲ್ಲಿಡಬೇಕು.

## ನ್ಯೂಟನ್ನನ ಸೇಬಿನಹಣ್ಣು

ಜ್ಞಾನವೆಂಬುದು ಹೊರಗಿನಿಂದ ಬರುವುದಿಲ್ಲ. ಅದು ಮನುಷ್ಯನ ಮನಸ್ಸಿನಲ್ಲಿಯೇ ಅಡಗಿರುತ್ತದೆ. ಪ್ರಪಂಚದಲ್ಲಿ ಇದುವರೆಗೆ ಗಳಿಕೆಯಾಗಿರುವ ಜ್ಞಾನವೆಲ್ಲವೂ ಮನಸ್ಸಿನಿಂದಲೇ ಬಂದಂಥದಾಗಿದೆ. ಬಾಹ್ಯ ಪ್ರಪಂಚವೆಂಬುದು ಸೂಚನೆ ಗಳನ್ನು ಮಾತ್ರವೇ ನೀಡುತ್ತ, ಮನಸ್ಸನ್ನು ವಿಚಾರ ಮಾಡು